ಜಮೀನುಗಳನ್ನು ತೆಗೆದುಕೊಂಡಿದ್ದಕ್ಕೆ ದಾಖಲೆಗಳಿಲ್ಲ. ಎಲ್ಲ ಈ ರೀತಿ ರೆವಿನ್ಯೂ ಇಲಾಖೆಗೆ ಥಾಖಲೆಗಳಿಲ್ಲ ಆಂಥಾ ಕಡೆ ಜಮೀನುಗಳನ್ನು ನಾನ್ ಅಗ್ರಿಕಲ್ಚರಲ್ ಲ್ಯಾಂಡ್ ಎಂದು ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೋಸ್ಕರವಾಗಿ ಎಲ್ಲಾ ಡೆಪ್ಯುಟಿ ಕಮೀಷನರ್‌ಗಳಿಗೂ 11-6-1976 ರಲ್ಲಿ ಸರ್ಕ್ಯುಲರ್‌ಗಳನ್ನು ಕಳಿಸಿ ದಾಖಲೆಗಳನ್ನು ತರಿಸಿಕೊಂಡು ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಬದಲಾವಣೆ ಮಾಡಬೇಕೆಂದು ತಿಳಿಸಿದ್ದೇವೆ.

ಶ್ರೀ ಬಿ. ಎಂ. ಹೊರಕೇರಿ.—ಮಾಲೀಕರು ತಮ್ಮ ಒಪ್ಪಿಗೆಯನ್ನು ಕೊಟ್ಟು ಇಂಥ ಕಡೆ ಸ್ಟೋರ್ ಬಿಲ್ಡಿಂಗ್ ಕಟ್ಟಬಹುದು, ಇಂಥ ಕಡೆ ರಸ್ತೆಗಳನ್ನು ಮಾಡಬಹುದೆಂದು ಸರ್ಕಾರಕ್ಕೆ ಹೇಳಿದ್ದರೂ ಕೂಡ ಯಾವ ಕೆಲಸಗಳೂ ಅಲ್ಲಿ ನಡೆದಿಲ್ಲ. ಆದುದರಿಂದ ಇಂಥ ಪ್ರಕರಣಗಳಲ್ಲಾದರೂ ಬದಲಾವಣೆಗಳನ್ನು ಮಾಡುತ್ತೀರಾ ?

ಶ್ರೀ ಎನ್. ಹುಚ್ಚವಾಸ್ತಿಗೌಡ.—ಯಾವರೀತಿಯಲ್ಲಿ ಬದಲಾವಣೆಗಳು ಇರಬೇಕೆಂದು ಅವರು ಹೇಳುತ್ತಾರೆ ಆ ರೀತಿ ಬರೆಸಿಕೊಂಡು ಬದಲಾವಣೆಗಳನ್ನು ಮಾಡಬೇಕೆಂದು ಡೆಪ್ಯುಟಿ ಕಮೀಷನರ್‌ಗಳಿಗೆ ತಿಳಿಸಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಈ ರಾಷ್ಟ್ರೀಯ ವಿನ್ಯಾಸ ಯೋಜನೆ ಪ್ರಾರಂಭ ಆದಾಗಿನಿಂದಲೂ ಕೆಲವರು ರಸ್ತೆಗಳನ್ನು ಮಾಡುವುದಕ್ಕೆ, ಸ್ಟೋರ್ ಬಿಲ್ಡಿಂಗ್‌ಗಳನ್ನು ಕಟ್ಟುವುದಕ್ಕೆ, ಇನ್ನೂ ಇತರೆ ಕಟ್ಟಡಗಳನ್ನು ಕಟ್ಟುವುದಕ್ಕೆ ಒಪ್ಪಿಗೆ ಕೊಟ್ಟು ಬರೆದು ಕೊಟ್ಟಿದ್ದರೂ ಕೂಡ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ ಆದುದರಿಂದ ತಾವು ದೊಡ್ಡ ಮನಸ್ಸು ಮಾಡಿ ಯಾರು ಯಾರು ಈ ರೀತಿ ಒಪ್ಪಿಗೆ ಕೊಟ್ಟು ಬರೆದುಕೊಟ್ಟಿದ್ದಾರೆ ಬರೆದು ಕೊಟ್ಟಿರುವುದರಲ್ಲಿ ಎಷ್ಟು ರೆವಿನ್ಯೂ ಆಫೀಸ್‌ಗಳಲ್ಲಿ ಬಿದ್ದು ಕೊಳೆಯುತ್ತಿವೆ, ಎಷ್ಟು ದಿವಸದಿಂದ ಇವೆ, ಎಂಬುದನ್ನು ತಾವು ಪಟ್ಟಿ ತರಿಸಿಕೊಳ್ಳಬೇಕು, ಏಕೆಂದರೆ, ಅನೇಕ ಜನ ರೈತರು ತಮ್ಮ ಜಮೀನುಗಳನ್ನು ಈ ರೀತಿ ಬಿಟ್ಟು ಕೊಟ್ಟಿದ್ದರೂ, ಅದರ ಕಂದಾಯವನ್ನು ಇನ್ನೂ ತಾವೇ ಕಟ್ಟಿಕೊಂಡು ಹೋಗುತ್ತಿದ್ದಾರೆ. ಆದುದರಿಂದ ತಾವು ಇದರ ಬಗ್ಗೆ ಎಲ್ಲ ಡೆಪ್ಯುಟಿ ಕಮೀಷನರ್‌ಗಳಿಂದಲೂ ಪಟ್ಟಿ ತರಿಸಿಕೊಂಡು ಆ ರೈತರು ಕಂದಾಯ ಕಟ್ಟುವುದನ್ನು ತಪ್ಪಿಸಿ, ಅದನ್ನು ನಾನ್-ಅಗ್ರಿಕಲ್ಚರಲ್ ಲಾಂಡ್ ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚವಾಸ್ತಿಗೌಡ —ನಾನು ಆಗಲೇ ಹೇಳಿದಹಾಗೆ 11-6-1976 ರಲ್ಲಿ ಎಲ್ಲ ಡೆಪ್ಯುಟಿ ಕಮೀಷನರ್‌ಗಳಿಗೂ ಸರ್ಕ್ಯುಲರ್ ಕಳುಹಿಸಿಕೊಟ್ಟಿದ್ದೇವೆ, ಎನ್. ಇ. ಎಸ್. ಆಫೀಸಿನಲ್ಲಿ ಜಮೀನುಗಳನ್ನು ತೆಗೆದುಕೊಂಡಿದ್ದಕ್ಕೆ ರಿಪಿಂಕ್ವಿಷ್‌ಮೆಂಟ್ ಸ್ಟೇಟ್‌ಮೆಂಟ್ ತೆಗೆದುಕೊಂಡಿದ್ದರೆ ಪಕ್ಕ ಮೋಡಿ ಮಾಡಬಹುದಾಗಿತ್ತು. ಆದರೆ ಆ ರೀತಿ ಅವರು ಮಾಡದೇ ಇರುವುದರಿಂದ ಇದನ್ನು ಮಾಡಿಲ್ಲ. ಆದ್ದರಿಂದ ಎಲ್ಲ ಆಫೀಸ್‌ಗಳಿಂದ ದಾಖಲೆಗಳನ್ನು ತರಿಸಿಕೊಳ್ಳಬೇಕೆಂದು ಹೇಳಿದ್ದೇವೆ.

9-30 A. M.

## Development of Forest

331. SRI N. BASAVAIAH (Chikkanayakanahalli).—Will the Minister for Food and Forests be pleased to state :—

(*a*) whether it has come to the notice of Government that the forest is around Kasaba Hobli, Chikkanayaknahalli Taluk, has been damaged ;

(*b*) if so, the programme chalked out by the Government for the development of forest ;

(*c*) if so, when the programme will be taken up ?

SRI K. H. PATIL (Minister for Food and Forests).—

(*a*) Yes,

(*b*) 550 acres of plantation work will be taken up during 1977-78. For this the advance trenching work has been taken up during 1976-77.

(*c*) Forest development work will be taken up each year from 1977-78.

ಶ್ರೀ ಎನ್. ಬಸವಯ್ಯ.—ಚಿಕ್ಕನಾಯಕನಹಳ್ಳಿ ಕಸಬಾ ಹೋಬಳಿ ಸುತ್ತಲೂ ಕಾಡು ಹಾಳಾಗಿ ಹೋಗಿದೆಯೇ ಎಂದು ಕೇಳಿರುವುದಕ್ಕೆ ಉತ್ತರವಾಗಿ ಹೌದು ಎಂದು ಹೇಳಿರುತ್ತೀರಿ. ಎಷ್ಟು ಎಕರೆಗಳಷ್ಟು ಅರಣ್ಯ ಹಾಳಾಗಿರುತ್ತದೆಂಬುದನ್ನು ತಿಳಿಸುತ್ತೀರಾ ?

† ಶ್ರೀ ಕೆ. ಎಚ್. ಪಾಟೀಲ್.—ಸುಮಾರು 17,764 ಎಕರೆಗಳಷ್ಟು ಕಾಡು ಇತ್ತು. ಇದರಲ್ಲಿ ಎಷ್ಟು ಹಾಳಾಗಿರುತ್ತದೆ, ಎಷ್ಟು ಇರುತ್ತದೆ ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ. ಕಾಡು ಹಾಳಾಗಿರುವ ಕಡೆ ಮತ್ತೆ ಹೊಂಗೆ ಬೇವು, ಬೂರುಗ ಇವೇ ಮುಂತಾದ ಮರಗಳನ್ನು ಬೆಳೆಸಲೂ ಕೂಡ ಸಾಕಷ್ಟು ಪ್ರಯತ್ನ ಮಾಡಿದ್ದೇವೆ.

ಶ್ರೀ ಎನ್. ಬಸವಯ್ಯ.—ಕಡಿದ ಕಾಡು ಜಾಸ್ತಿ ಇದ್ದು ಅದನ್ನು ಪುನರ್ ವ್ಯವಸ್ಥೆಗೊಳಿಸಲು ಕೊಟ್ಟಿರತಕ್ಕಂಥ ಕಾಡು 550 ಎಕರೆಗಳೆಂದು ಹೇಳಿದ್ದೀರಿ, ಇದು ಬಹಳ ಕಡಿಮೆ ಇರುವುದರಿಂದ ಈ ಒಂದು ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಪ್ರದೇಶವನ್ನು ಮಂಜೂರು ಮಾಡಿ ಹೆಚ್ಚು ಕಾಡನ್ನು ಬೆಳೆಯುವ ವ್ಯವಸ್ಥೆಯನ್ನು ಮಾಡುತ್ತೀರಾ ?.

ಶ್ರೀ ಕೆ ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೆಚ್ಚು ಪ್ರದೇಶವನ್ನು ಮಂಜೂರು ಮಾಡಿ ಕಾಡನ್ನು ಬೆಳೆಸುವ ಬಗ್ಗೆ ಮಂಡಿಸಿರುವ ಪಾದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇದನ್ನು ತೀವ್ರವಾಗಿ ಪರಿಶೀಲಿಸುತ್ತೇನೆ. ಮತ್ತು ಹಾಲಿ ಇರುವ ಕಾಡನ್ನು ಹಾಳುಮಾಡಬಾರದೆಂದು ಎಲ್ಲ ಸದಸ್ಯರಲ್ಲಿಯೂ ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಎಷ್ಟು ಎಕರೆಗಳಷ್ಟು ಜಮೀನನ್ನು ಪ್ಲೈನ್ಸ್‌ಗೋಸ್ಕರವಾಗಿ ಮತ್ತು ಎಷ್ಟು ಎಕರೆಗಳಷ್ಟು ಜಮೀನನ್ನು ಸಾಗುವಳಿಗಾಗಿ ಕೊಟ್ಟಿರುತ್ತೀರಿ, ಮತ್ತು ಎಷ್ಟು ಏಕರೆಗಳಷ್ಟು ಕಾಡು ಇರುತ್ತದೆಂದು ದಯವಿಟ್ಟು ತಿಳಿಸಬೇಕು ?

ಶ್ರೀ ಕೆ. ಎಚ್. ಪಾಟೀಲ್ —17,765 ಎಕರೆಗಳಷ್ಟು ಮಾತ್ರ ಕಾಡು ಇರುತ್ತದೆ. ಮಿಕ್ಕ ಪ್ರಶ್ನೆಗಳಿಗೆ ಯಾವು ಯಾವುದು ಎಷ್ಟೆಷ್ಟು ಎಕರೆಗಳಿವೆ ಎನ್ನುವುದಕ್ಕೆ ನನ್ನಲ್ಲಿ ಅಂಕಿಸಂಖ್ಯೆಗಳು ಇಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಕೊಡಲು ಸಾಧ್ಯ.

## Lift Irrigation schemes in Kollegal Taluk

354. SRI M. SIDDAMADAIAH (Kollegal).—Will the Minister of State for Minor Irrigation and Protocol be pleased to state:—

(*a*) whether the Government had received any representation to take up Lift Irrigation near old bridge of Shivanasamudra in Kollegal Taluk ;

(*b*) if so, whether the Government intend to start the work early ?